## ಶತಮಾನದ ಈಳಿಗೆ

ಈ ಈಳಿಗೆಯನ್ನು ಕಬ್ಬಿಣದಿಂದ ಮಾಡಲಾಗಿದ್ದು ಅಂದಾಜು 120 ವರ್ಷದ ಮೆಲ್ಪಟ್ಟಿದೆ. ಇದು ನಮ್ಮ ಅಜ್ಜಿಯ ಅತ್ತೆಯ ಅತ್ತೆಯ ಕಾಲದ್ದು, ಇದರ ನಾಲಿಗೆ ಇನ್ನೂ ಹರಿತವಾಗಿದ್ದು, ನಮ್ಮ ಮನೆಯಲ್ಲಿ ಬಳಸುತ್ತಿದ್ದೇವೆ. ಈಗಿನ ದಿನಮಾನಗಳಲ್ಲಿ ಕಟ್ಟಿಗೆಯಿಂದ ಮಾಡಿದ ಸ್ಟೀಲ್ ನಾಲಿಗೆಯ ಈಳಿಗೆಯನ್ನು  ನೋಡಬಹುದು. ಇವು ಬೇಗನೆ ಮೊಂಡಾಗಿಬಿಡುತ್ತವೆ. ನಂತರ ಈಳಿಗೆಯ ನಾಲಿಗೆಯನ್ನು ಹರಿತ ಮಾಡಲು ಕೊಡಬೇಕಾಗುತ್ತದೆ.

**-ವಿದ್ಯಾಶ್ರೀ ಗಾಣಿಗೇರ, ವಿಜಯಪುರ**





## ಖಡ್ಗ ರಾವಣನಿಗೊಂದು ಆಲಯ

ಉಡುಪಿ–ಶಿವಮೊಗ್ಗ ಹೆದ್ದಾರಿಯಲ್ಲಿದೆ ಪೆರ್ಡೂರಿನ ಅನಂತಪದ್ಮನಾಭ ದೇವಸ್ಥಾನ. ಈ ದೇವಾಲಯದಲ್ಲಿರುವ ಕ್ಷೇತ್ರ ರಕ್ಷಕನ ಹೆಸರು ಖಡ್ಗ ರಾವಣ.  ವಿಶಿಷ್ಟ ವಿನ್ಯಾಸದ  ಈ ಆಲಯದಲ್ಲಿ ಖಡ್ಗವನ್ನು ಹಿಡಿದಿರುವ ಕ್ಷೇತ್ರರಕ್ಷಕನ ವಿಗ್ರಹವನ್ನು ಕಂಬದ ಮೇಲೆ ಕೆತ್ತಲಾಗಿದೆ. ಇದೊಂದು ಅಪರೂಪದ ಆಲಯ.

**– ರಮೇಶ್ ಬಿ.ಎಂ., ಉಡುಪಿ**

## ಕಂಬಳಿಹುಳಗಳ ಚಿತ್ತಾರ

ಪೇರಳೆ ಗಿಡದ ಎಲೆಯೊಂದರಲ್ಲಿ ಚಿತ್ತಾರ ರೀತಿಯ ಆಕರ್ಷಣೆ ಕಂಡುಬಂತು. ಇದೇನಿದು ಎಂದು ನೋಡಿದರೆ ಕಂಬಳಿ ಹುಳಗಳ ರಾಶಿ. ಅಚ್ಚುಕಟ್ಟಾಗಿ ಜೋಡಿಸಿಟ್ಟವರಂತೆ ಚಿತ್ತಾರದ ಮಾದರಿಯಲ್ಲಿ ಎಲೆಯ ಅಡಿಭಾಗದಲ್ಲಿ ಗುಂಪಾಗಿದ್ದವು. ಬಿಳಿ ಹಾಗೂ ಕಪ್ಪು ಕಲೆಗಳ ಮೈಕಟ್ಟು ಹೊಂದಿರುವ ಕಂಬಳಿ ಹುಳಗಳು ಅಲ್ಲೇ ಎಲೆಯನ್ನು ತಿಂದು ಬದುಕುತ್ತಿರುವುದು ಗಮನ ಸೆಳೆಯುವಂತಿತ್ತು.

**-ಆಶಾ ಕೆರೆಗದ್ದೆ, ಶಿರಸಿ**

